೪) ನಿರ್ಲಕ್ಷಿತ ಜನ ಅಭ್ಯರ್ಥಿಗಳು ಹಿಂದೆ ಕೆಲಸ ಮಾಡುತ್ತಿದ್ದ ಶಾಲೆಗಳನ್ನು ಬಿಟ್ಟು ಬೇರೆ ಬೇರೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರುಗಳ ವಿವರಗಳು ಈ ರೀತಿ ಇವೆ.—

ಹರಿಜನ ಅಭ್ಯರ್ಥಿಗಳು	—	೨೩
ಗಿರಿಜನ —ಡು—	—	೫
ಹಿಂದುಳಿದ ಜನಾಂಗದ ಅಭ್ಯರ್ಥಿಗಳು	—	೧೮
ಬಿ. ಸಿ. ಎಮ್.	—	೪೬
ಇತರರು	—	೯೫
	ಒಟ್ಟು	೧೮೭

ಅಥಣಿ ವಿಧಾನಸಭಾ ಶಾಲಾ ಕಾಲೇಜುಗಳು.

೨೬೨. ಶ್ರೀಮತಿ. ಲೀಲಾದೇವಿ. ಆರ್. ಪ್ರಸಾದ್(ಅಥಣಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಥಣಿ ತಾಲ್ಲೂಕಿನಲ್ಲಿರುವ ಕಾಗವಾಡ ವಿಧಾನಸಭಾ ಕ್ಷೇತ್ರ ಹಾಗೂ ಅಥಣಿ ವಿಧಾನಸಭಾ ಕ್ಷೇತ್ರಗಳಲ್ಲಿರುವ ಕಾಲೇಜು ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಮತ್ತು ತಾಂತ್ರಿಕ ಶಾಲೆ, ಮಾಧ್ಯಮಿಕ ಶಾಲೆ, ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ)		ಅಥಣಿ	ಕಾಗವಾಡ	ಒಟ್ಟು
೧)	ಪ್ರಥಮ ದರ್ಜೆ ಕಾಲೇಜುಗಳು	೧	೧	೨
೨)	ಕಿರಿಯ ಕಾಲೇಜುಗಳು	೪	೨	೬
೩)	ಪ್ರೌಢಶಾಲೆಗಳು	೧೦	೧೨	೨೨
೪)	ಕಿರಿಯ ಪ್ರಾಥಮಿಕ ಶಾಲೆಗಳು	೭೦	೮೧	೧೫೧
೫)	ಹಿರಿಯ ಪ್ರಾಥಮಿಕ ಶಾಲೆಗಳು	೫೬	೫೬	೧೧೨
೬)	ಬಾಲವಾಡಿಗಳು	೧೨	೪	೧೬
೭)	ತಾಂತ್ರಿಕ ಶಾಲೆ ಕಾಲೇಜುಗಳು	—	—	—
		೧೫೩	೧೫೬	೩೦೯

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗೆ ಬಂದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಒಟ್ಟು ಅರ್ಜಿಗಳ ಬಗ್ಗೆ.

೨೯೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ) ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಮಟ್ಟದ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಬಂದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಒಟ್ಟು ಅರ್ಜಿಗಳೆಷ್ಟು ಕ್ಷೇತ್ರವಾರು ವಿವರ)

ಆ) ಆವರಲ್ಲಿ ಆಯ್ಕೆಯಾದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಸಂಖ್ಯೆ ಎಷ್ಟು ? (ಕ್ಷೇತ್ರವಾರು ವಿವರ)

ಶ್ರೀ ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಹರಿಜನ ಅಭ್ಯರ್ಥಿಗಳು ೭೫೭, ಗಿರಿಜನ ಅಭ್ಯರ್ಥಿಗಳು ೨೬೭. ಕ್ಷೇತ್ರವಾರು ವಿವರಗಳು ಸಿಗುವುದಿಲ್ಲವಾದ್ದರಿಂದ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇವೆ.

ಮಂಗಳೂರು ತಾಲ್ಲೂಕು	೯೫	೮
ಬಂಟ್ವಾಳ ತಾಲ್ಲೂಕು	೧೫	೨೨
ಬೆಳ್ತಂಗಡಿ ತಾಲ್ಲೂಕು	೨೦	೧೪
ಸೂಳ್ಯ ತಾಲ್ಲೂಕು	೧೫	೨೦
ಪುತ್ತೂರು ತಾಲ್ಲೂಕು	೪೭	೩೪
ಉಡುಪಿ ತಾಲ್ಲೂಕು	೧೫೩	೨೮
ಕಾರ್ಕಳ ತಾಲ್ಲೂಕು	೩೧	೦೭
ಕುಂದಾಪುರ ತಾಲ್ಲೂಕು	೬೯	೧೨
ಇತರ ಜಿಲ್ಲೆಗಳಿಂದ	೩೧೨	೧೨೨

ಆ) ಹರಿಜನ ಅಭ್ಯರ್ಥಿಗಳು ೭೬, ಗಿರಿಜನ ಅಭ್ಯರ್ಥಿಗಳು ೨೧. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಮಂಗಳೂರು ತಾಲ್ಲೂಕು	೧೪	೨
ಬಂಟ್ವಾಳ ತಾಲ್ಲೂಕು	೩	೨
ಬೆಳ್ತಂಗಡಿ ತಾಲ್ಲೂಕು	೩	೦
ಸೂಳ್ಯ ತಾಲ್ಲೂಕು	೫	೪
ಪುತ್ತೂರು ತಾಲ್ಲೂಕು	೧೧	೫
ಉಡುಪಿ ತಾಲ್ಲೂಕು	೨೭	೪
ಕಾರ್ಕಳ ತಾಲ್ಲೂಕು	೨	೧
ಕುಂದಾಪುರ ತಾಲ್ಲೂಕು	೧೧	೨
ಇತರ ಜಿಲ್ಲೆಗಳಿಂದ	—	—

ಸೇವಾವಧಿ ಮುಂಗಿಯದ ಮೊದಲೇ ವರ್ಗಾವಣೆ ಮಾಡಿರುವ ಬಗ್ಗೆ

೩೧೧. ಶ್ರೀ ಆರ್.ಎನ್. ನಾಯ್ಕ (ಭಟ್ಕಳ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ಸಂಚಾಲಕರು ವರ್ಗಾವರ್ಗಿ ಆಜ್ಞೆ ಹೊರಡಿಸುವ ದಿನಾಂಕದಂದು ಕಾನೂನಿನ ರೀನ್ಯಾ ಸೇವಾವಧಿ ಮುಗಿಯದವರಿಗೆ ಮುಂದಿನ ದಿನಾಂಕದಂದು ಬಿಡುಗಡೆಯಾಗುವಂತೆ ಆಜ್ಞೆ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಕಾಯಿದೆಯಂತೆ ಹಾಗೆ ಮಾಡಲು ಅವಕಾಶವಿದೆಯೇ?

ಶ್ರೀ ಎಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಬಂದಿದೆ

ಆ) ಇರುವುದಿಲ್ಲ